

بسم الله الرّحمٰن الرّحيم

# ಇಸ್ಲಾಂ ಪರಿಪೂರ್ಣ ಧರ್ಮ – ಖುರ್ಆನ್ ಪರಿಪೂರ್ಣ ಗ್ರಂಥ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ **07–04–2023** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ.

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ- بِسْمِ اللّٰهِ الرَّحْمٰنِ الرَّحِيْمِ.

اَلْحَمْدُ لِلّٰهِ رَبِّ الْعٰلَمِيْنَ. اَلرَّحْمٰنِ الرَّحِيْمِ. مٰلِكِ يَوْمِ الدِّيْنِ. إِيَّاكَ نَعْبُدُ وَإِيَّاكَ نَسْتَعِيْنُ.

اِهْدِنَا الصِّرَاطَ الْمُسْتَقِيْمَ. صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ.

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಅಲ್ಲಾಹನು ಹಝ್ರತ್ ಪೈಗಂಬರ್(ಸ)ರ ಮೂಲಕ ಶರೀಅತನ್ನು ಪರಿಪೂರ್ಣಗೊಳಿಸಿ ಪವಿತ್ರ ಖುರ್ಆನಿನಲ್ಲಿ ಹೀಗೆ ಘೋಷಿಸಿದನು:

اَلْيَوْمَ أَكْمَلْتُ لَكُمْ دِيْنَكُمْ وَأَتْمَمْتُ عَلَيْكُمْ نِعْمَتِيْ وَرَضِيْتُ لَكُمُ الْإِسْلَامَ دِيْنًا

ಎಂದರೆ, ಈ ದಿನ ನಿಮ್ಮ ಧರ್ಮವನ್ನು ನಿಮಗೆ ನಾನು ಪರಿಪೂರ್ಣಗೊಳಿಸಿರುವೆನು; ನನ್ನ ಅನುಗ್ರಹವನ್ನು ನಿಮಗೆ ಸಂಪೂರ್ಣವಾಗಿ ದಯಪಾಲಿಸಿರುವೆನು ಹಾಗೂ ಇಸ್ಲಾಮನ್ನು ನಿಮಗೆ ಧರ್ಮವಾಗಿ ತೃಪ್ತಿಪಟ್ಟಿರುವೆನು. ಒಟ್ಟಿನಲ್ಲಿ ಅಲ್ಲಾಹನು ಮುಸ್ಲಿಮರಿಗೆ ಒಂದು ಪರಿಪೂರ್ಣವಾದ ಶರೀಅತನ್ನು ದಯಪಾಲಿಸಿರುವನು ಎಂಬುದು ಅವರ ಮೇಲೆ ಅವನು ಮಾಡಿರುವ ಬಹಳ ದೊಡ್ಡ ಔದಾರ್ಯವಾಗಿದೆ. ಈಗ ಅಂತಿಮ ಧರ್ಮ ಇಸ್ಲಾಮ್ ಮಾತ್ರವಾಗಿದೆ ಎಂಬುದು ಕೇವಲ ಇಸ್ಲಾಮಿನ ವಾದವಾಗಿದೆ. ಇತರ ಧರ್ಮಗಳದ್ದಲ್ಲ. ಅದು ಅಲ್ಲಾಹನಿಗೆ ಪ್ರಿಯವಾದ ಧರ್ಮವಾಗಿದೆ. ಅಲ್ಲಾಹನ ಸಂಪ್ರೀತಿ ಬೇಕಿದ್ದರೆ ಇಸ್ಲಾಂ ಸ್ವೀಕಾರ ಮಾಡುವುದಲ್ಲದೇ, ಅದರ ಬೋಧನೆಗಳ ಪ್ರಕಾರ ನಡೆಯುವುದಲ್ಲದೇ ಅನ್ಯ ಮಾರ್ಗವಿಲ್ಲ. ಈಗ ಮನುಷ್ಯನ ನೈತಿಕ ಮತ್ತು ಆಧ್ಯಾತ್ಮಿಕ ಅಭಿವೃದ್ಧಿಗೆ ಇರುವ ಮಾರ್ಗ ಪವಿತ್ರ ಖುರ್ಆನಿನ ಅಧ್ಯಾಪನೆ ಮಾತ್ರವಾಗಿದೆ ಎಂದು ಅಲ್ಲಾಹನು ಘೋಷಿಸುತ್ತಿದ್ದಾನೆ. ಮಾತ್ರವಲ್ಲ, ಈ ಅಧ್ಯಾಪನೆ ಎಷ್ಟು ಪರಿಪೂರ್ಣವಾಗಿದೆ ಎಂದರೆ, ಭೌತಿಕವಾದ ಪ್ರಗತಿಯ ಮಾರ್ಗಗಳಿಗೂ ಬೇಕಾಗಿರುವ ಅಧ್ಯಾಪನೆ ಇದೇ ಆಗಿದೆ.

ಈ ಅಧ್ಯಾಪನೆಯ ಕುರಿತು ಅಲ್ಲಾಹನು **ಅಕ್‌ಮಲ್‌ತು** ಎಂದು ಘೋಷಿಸುವಾಗ ಅದರ ತಾತ್ಪರ್ಯವೇನೆಂದರೆ, ಮನುಷ್ಯನ ಎಲ್ಲ ಸಾಮರ್ಥ್ಯಗಳು, ಅವು ನೈತಿಕ, ಆಧ್ಯಾತ್ಮಿಕ, ದೈಹಿಕವಾಗಿದ್ದರೂ ಸರಿ, ಅವುಗಳನ್ನು ಪವಿತ್ರ ಖುರ್ಆನಿನ ಪ್ರಕಾರ ನಡೆಯುವುದರ ಮೂಲಕವೇ ಗಳಿಸಲು ಸಾಧ್ಯ ಎಂದಾಗಿದೆ. ಮನುಷ್ಯನ ಪ್ರತಿಯೊಂದು ಆವಶ್ಯಕತೆಗಳನ್ನು ಎಲ್ಲ ರೀತಿಯಲ್ಲೂ ಪವಿತ್ರ ಖುರ್ಆನ್ ಮಾತ್ರ ಈಡೇರಿಸುತ್ತದೆ. ಪವಿತ್ರ ಖುರ್ಆನಿನಲ್ಲಿ ಒಳಗೊಂಡಿರದ ಯಾವುದೇ ಆವಶ್ಯಕತೆಯಿಲ್ಲ. ಅದು ಮನುಷ್ಯನ ಭೌತಿಕ ಆವಶ್ಯಕತೆಗಳಾಗಿದ್ದರೂ, ಆಧ್ಯಾತ್ಮಿಕ, ನೈತಿಕ ಮಟ್ಟಗಳನ್ನು ಗಳಿಸಲಿರುವ ಮಾರ್ಗಗಳಾಗಿದ್ದರೂ ಸರಿ.

ಈಗ ಮನುಷ್ಯನ ಉಳಿಯುವಿಕೆ ಈ ಅಧ್ಯಾಪನೆಯೊಂದಿಗೆ ಮಾತ್ರ ಹೊಂದಿಕೊಂಡಿದೆ ಎಂದು ಪವಿತ್ರ ಖುರ್ಆನ್ ಈ ವಚನದ ಮೂಲಕ ಘೋಷಿಸಿದೆ. ಈ ಅಧ್ಯಾಪನೆ ಎಲ್ಲ ಕಾಲಕ್ಕೂ ಪೂರ್ತಿ ಲೋಕದ ಮನುಷ್ಯರಿಗೂ ಇರುವುದಾಗಿದೆ. ಪವಿತ್ರ ಖುರ್ಆನಿಗೆ ಮುಂಚೆ ಬಂದಿದ್ದ, ಬೇರೆ ಬೇರೆ ಪ್ರವಾದಿಗಳಿಗೆ ಅವತೀರ್ಣಗೊಂಡಿದ್ದ ಎಲ್ಲ ಬೋಧನೆಗಳು ತಾತ್ಕಲಿಕ ಮತ್ತು ಆ ಕಾಲಘಟ್ಟಕ್ಕೆ ಅನುಸಾರವಾಗಿದ್ದುವು.

ಇದನ್ನು ಸ್ಪಷ್ಟಪಡಿಸಲಿಕ್ಕಾಗಿ ಹಝ್ರತ್ ಮಸೀಹ್ ಮೌಊದ್(ಅ) ಹೀಗೆಯೂ ಘೋಷಿಸಿದರು: ಹಝ್ರತ್ ಪೈಗಂಬರ್(ಸ)ರ ಆಗಮನದ ಉದ್ದೇಶ ಸಹ ಈಡೇರಿದೆ ಎಂದು ಇದರಿಂದ ಸಾಬೀತಾಗುತ್ತದೆ. ಈ ಪರಿಪೂರ್ಣವಾದ ಶರೀಅತ್ ಅವತೀರ್ಣವಾದದ್ದು ಪರಿಪೂರ್ಣ ಮತ್ತು ಅಂತಿಮ ಪ್ರವಾದಿಯಾದ ಪೈಗಂಬರ್(ಸ)ರ ಮೇಲೆಯೇ ಆಗಿದೆ. ಪವಿತ್ರ ಖುರ್ಆನನ್ನು ಕೊನೆಯ ಶರೀಅತ್ ಎಂದೂ ಹಝ್ರತ್ ಪೈಗಂಬರ್(ಸ)ರನ್ನು ಕೊನೆಯ ಪ್ರವಾದಿಯೆಂದೂ ಒಪ್ಪುತ್ತಿರುವಾಗ ಹಝ್ರತ್ ಮಸೀಹ್ ಮೌಊದ್(ಅ)ರ ವಾದಗಳಿಗೆ ಯಾವ ಸ್ಥಾನವಿದೆ ಎಂದೂ ಅವರ ಬರುವಿಕೆಯ ಉದ್ದೇಶವೇನು ಎಂದೂ ಆಕ್ಷೇಪಕರು ಪ್ರಶ್ನಿಸುತ್ತಾರೆ. ಇದಕ್ಕೆ ಉತ್ತರವನ್ನು ಹಝ್ರತ್ ಮಸೀಹ್ ಮೌಊದ್(ಅ) ಒಂದೆಡೆ ಹೀಗೆಯೂ ಹೇಳಿರುವರು: ನೀವು ಇಸ್ಲಾಮಿನ ಅಧ್ಯಾಪನೆಗಳ ಪ್ರಕಾರ ನಡೆಯುತ್ತಿರುವಿರಿ ಎಂದಾದರೆ ಸರಿ; ನನ್ನ ಆಗಮನದ ಆವಶ್ಯಕತೆಯಿಲ್ಲ. ಆದರೆ ಒಬ್ಬ ಬೋಧಕನ ಆವಶ್ಯಕತೆಯಿದೆ ಎಂದು ಕಾಲಘಟ್ಟದ ಸಾಮಾನ್ಯ ಸ್ಥಿತಿ ಮತ್ತು ವಿಶೇಷವಾಗಿ ಮುಸ್ಲಿಮರ ಸ್ವಂತ ಅವಸ್ಥೆ ಘೋಷಿಸುತ್ತಿದೆ. ನಾನು ಹಝ್ರತ್ ಪೈಗಂಬರ್(ಸ)ರ ದಾಸ್ಯದಲ್ಲಿ ಹಝ್ರತ್ ಪೈಗಂಬರ್(ಸ)ರ ಶರೀಅತ್, ಧರ್ಮ ಮತ್ತು ಪವಿತ್ರ ಖುರ್ಆನಿನ ಅಧ್ಯಾಪನೆಗಳನ್ನು ಹರಡಲು ಆಗಮಿಸಿರುವೆನು ಎಂದು ಹಝ್ರತ್ ಮಸೀಹ್ ಮೌಊದ್(ಅ) ತನ್ನ ಸಾಹಿತ್ಯಗಳು, ಲಿಖಿತಗಳು ಮತ್ತು ಗ್ರಂಥಗಳಲ್ಲಿ ಎಲ್ಲಡೆ ಹೇಳಿರುವರು.

ಇದೇ ಕೆಲಸವನ್ನು ಅವರು ಪೂರ್ತಿ ಮಾಡಿದ್ದರು. ಇದನ್ನೇ ಜಾರಿಯಲ್ಲಿರಿಸಲು ಅಹ್ಮದಿಯಾ ಜಮಾಅತ್ ಸ್ಥಾಪನೆಗೊಂಡಿತು. ಅವರು ನೀಡಿದ ಸಾಹಿತ್ಯ ಮತ್ತು ಅವರು ಮಾಡಿದ ಪವಿತ್ರ ಖುರ್ಆನಿನ ವ್ಯಾಖ್ಯಾನದ ಪ್ರಕಾರ ಇದೇ ಕೆಲಸವನ್ನು ಅಹ್ಮದಿಯಾ ಜಮಾಅತ್ ಮಾಡುತ್ತಿದೆ. ನಾವು ಈ ಉದ್ದೇಶವನ್ನು ಎಷ್ಟರ ಮಟ್ಟಿಗೆ ಈಡೇರಿಸುತ್ತಿದ್ದೇವೆ ಎಂದು ಪ್ರತಿಯೊಬ್ಬ ಅಹ್ಮದಿ ಯೋಚಿಸಬೇಕಾಗಿದೆ. ಸಾಮೂಹಿಕವಾಗಿ ಕೆಲಸ ನಡೆಯುತ್ತಿವೆ. ಆದರೆ ವೈಯಕ್ತಿಕವಾಗಿಯೂ ನಡೆಯಬೇಕು. ನಾವು ಈ ಉದ್ದೇಶವನ್ನು ಮುಂದೆ ಇರಿಸಿದರೆ ಮಾತ್ರ ನಮ್ಮ ಬೈಅತ್ತಿನ ಉದ್ದೇಶ ಈಡೇರುವುದು. ಅದಕ್ಕಾಗಿ ನಾವು ಪವಿತ್ರ ಖುರ್ಆನನ್ನು ಪಠಿಸುವ ಮತ್ತು ಮನವರಿಕೆ ಮಾಡುವುದರ ಕಡೆಗೆ ಸದಾ ಗಮನಹರಿಸಬೇಕು. ಅದಕ್ಕಿರುವ ಅತ್ಯುತ್ತಮ ಮಾರ್ಗ ಹಝ್ರತ್

ಮಸೀಹ್ ಮೌಊದ್(ಅ)ರ ಗ್ರಂಥಗಳು ಮತ್ತು ಉಪದೇಶಗಳು ಆಗಿವೆ.

ಪವಿತ್ರ ಖುರ್‌ಆನಿನ ಆಜ್ಞೆಗಳನ್ನು ಪರಿಪೂರ್ಣವಾಗಿ ಅನುಸರಿಸುವೆನು ಎಂಬ ಪ್ರತಿಜ್ಞೆಯನ್ನು ಬೈಅತ್ತಿನ ಹತ್ತು ನಿಬಂಧನೆಗಳಲ್ಲಿ ಸೇರಿಸಲಾಗಿದೆ. ಆದ್ದರಿಂದ ನಮ್ಮಲ್ಲಿ ಪ್ರತಿಯೊಬ್ಬರು ಈ ರಮಝಾನಿನಲ್ಲಿ ಈ ನಿರ್ದೇಶನ ಪ್ರಕಾರ ನಡೆಯಲು ತೀರ್ಮಾನ ಮಾಡಿದರೆ ನಾವು ನಮ್ಮ ಆಧ್ಯಾತ್ಮಿಕತೆಯನ್ನು ವರ್ಧಿಸುವವರಾಗುವೆವು. ಮಾತ್ರವಲ್ಲ, ನಮ್ಮ ಸಮಾಜ ಸ್ವರ್ಗೀಯ ಸಮಾಜವಾಗುವುದು.

(ಹಝ್ರತ್ ಮಸೀಹ್ ಮೌಊದ್(ಅ)ರ ಮಾತುಗಳನ್ನು ಉಲ್ಲೇಖಿಸುತ್ತಾ ಹುಝೂರ್ ಹೇಳಿದರು:) ಮನುಷ್ಯನ ಸ್ವಭಾವದಲ್ಲಿ ಉಂಟಾಗಬಹುದಾದ ಅತ್ಯಂತ ಹೆಚ್ಚಿನ ಕೆಡುಕು, ದುರ್ಮಾರ್ಗ, ದುಷ್ಕೃತ್ಯ ಎಂಬೀ ಎಲ್ಲ ಕೇಡುಗಳನ್ನು ಪವಿತ್ರ ಖುರ್‌ಆನಿನ ಮೂಲಕ ಸುಧಾರಿಸಲಾಯಿತು. ಮನುಷ್ಯರಲ್ಲಿ ಈ ಎಲ್ಲ ಕೆಡುಕುಗಳು ಉಂಟಾಗಿದ್ದ ಮತ್ತು ಮೆಲ್ಲಮೆಲ್ಲನೇ ಮನುಷ್ಯನ ಸ್ಥಿತಿ ಪ್ರತಿಯೊಂದು ಮೂಢನಂಬಿಕೆ ಮತ್ತು ದುಷ್ಕೃತ್ಯಗಳಿಂದ ಕಲುಷಿತಗೊಂಡಿದ್ದ ಸಮಯದಲ್ಲಿ ಅಲ್ಲಾಹನು ಪವಿತ್ರ ಖುರ್‌ಆನನ್ನು ಅವತೀರ್ಣ ಗೊಳಿಸಿದನು. ಅಂತಹ ಸಮಯದಲ್ಲಿ ಅವನ ಪರಿಪೂರ್ಣವಾದ ವಚನ ಅವತೀರ್ಣವಾಗಬೇಕು ಎಂಬುದನ್ನೇ ದೈವಿಕ ಯುಕ್ತಿ ಆವಶ್ಯಪಡುತ್ತಿತ್ತು. ಏಕೆಂದರೆ, ಕೆಡುಕುಗಳು ಉಂಟಾಗುವುದಕ್ಕೆ ಮುಂಚಿತವಾಗಿ ಅಂತಹ ಅಪರಾಧಗಳ ಮತ್ತು ತಪ್ಪಾದ ವಿಶ್ವಾಸಗಳ ಬಗ್ಗೆ ಗೊತ್ತಿಲ್ಲದ ಜನರಿಗೆ ತಿಳಿಸಿಕೊಡುವುದು ಅಂತಹ ಪಾಪಗಳ ಕಡೆಗೆ ಸೆಳೆಯುವಂತಹ ಕೆಲಸವನ್ನು ಮಾಡುತ್ತದೆ.

ಅರಿವು ಮತ್ತು ಜ್ಞಾನವಿರುವವರು ಹೇಗಿದ್ದರೂ ಒಬ್ಬ ಸಾಮಾನ್ಯ ವ್ಯಕ್ತಿಗೆ ಸಮಾನರಾಗಿರಲಾರರು. ಅಲ್ಲಾಹನ ವಚನವು ಮನುಷ್ಯನ ವಚನಕ್ಕಿಂತ ಶ್ರೇಷ್ಠವಾಗಿರಬೇಕಾದದ್ದು ಅಗತ್ಯ. ದೈವಿಕ ಜ್ಞಾನ ಮಾನುಷಿಕ ವಚನಕ್ಕೆ ಸಮಾನವಾಗಿರದು. ಒಟ್ಟಿನಲ್ಲಿ, ಎಲ್ಲ ರೀತಿಯಲ್ಲೂ ಪರಿಪೂರ್ಣವಾಗಿದೆ ಎಂಬುದು ಪವಿತ್ರ ಖುರ್‌ಆನಿನ ವಾದವಾಗಿದೆ. ಅದಕ್ಕೆ ಸಮಾನವಾದದ್ದು ಎಂದಿಗೂ ಉಂಟಾಗಿಲ್ಲ ಮತ್ತು ಉಂಟಾಗಲು ಸಾಧ್ಯವೂ ಇಲ್ಲ. ಯಾರು ಈ ಪರಿಶುದ್ಧ ವಚನಕ್ಕೆ ಅನುಗುಣವಾಗಿ ಇರುತ್ತಾರೋ ಅವರಲ್ಲೇ ಅದರ ಪ್ರಭಾವಗಳು ಪ್ರಕಟಗೊಳ್ಳಲು ಸಾಧ್ಯ. ಒಟ್ಟಿನಲ್ಲಿ, ಅದರ ಪ್ರಕಾರ ನಡೆಯುವವರೇ ಅಸಾಧಾರಣವಾದ ಅನುಗ್ರಹಗಳನ್ನು ಗಳಿಸುವವರಾಗುವರು ಎಂಬುದು ಸಹ ಪವಿತ್ರ ಖುರ್‌ಆನಿನ ಬೋಧನೆಯ ವೈಶಿಷ್ಟ್ಯವಾಗಿದೆ.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಪವಿತ್ರ ಖುರ್‌ಆನ್ ತನ್ನ ಭಾಷಾ ಶ್ರೇಷ್ಠತೆ ಮತ್ತು ವಾಗ್ಮಿಯತೆಯನ್ನು ಸತ್ಯತೆ ಮತ್ತು ಸತ್ಯದ ಆವಶ್ಯಕತೆಗೆ ಅನುಸಾರವಾಗಿ ಮುಂದಿರಿಸಿದೆ. ಯಾವ ಕಾರ್ಯಗಳಲ್ಲಿ ಕೆಡುಕು ಕಂಡುಬಂತೋ ಅವುಗಳ ಸುಧಾರಣೆಗಾಗಿ ಒತ್ತುಕೊಟ್ಟಿದೆ. ಅನೇಕ ವಿಧಗಳ ರೋಗಗಳಿಗೆ ಚಿಕಿತ್ಸೆಯನ್ನು ಬರೆದಿದೆ. ಮಿಥ್ಯೆ ಧರ್ಮಗಳ ಪ್ರತಿಯೊಂದು ಸಂಶಯಗಳನ್ನು ಅಳಿಸಿದೆ. ಪ್ರತಿಯೊಂದು ಆಕ್ಷೇಪಕ್ಕೆ ಉತ್ತರ ನೀಡಿದೆ. ಯಾವುದೇ ಸತ್ಯವನ್ನು ಪ್ರಸ್ತಾಪಿಸದೇ ಇರಲಿಲ್ಲ. ಯಾವುದೇ ವಾಕ್ಯವನ್ನು ಅನಾವಶ್ಯಕವಾಗಿ ಬರೆದಿಲ್ಲ. ಯಾವುದೇ ಸಂಗತಿಯನ್ನು ಸಂದರ್ಭೋಚಿತವಾಗಿಯಲ್ಲದೆ ಪ್ರಸ್ತಾಪಿಸಿಲ್ಲ. ಯಾವುದೇ ಪದವನ್ನು ವ್ಯರ್ಥವಾಗಿ ಉಪಯೋಗಿಸಿಲ್ಲ. ಭಾಷಾ ಶ್ರೇಷ್ಠತೆಯನ್ನು ಎಷ್ಟರ ಮಟ್ಟಿಗೆ ತಲುಪಿಸಿದೆ ಎಂದರೆ ಅದರ ಜ್ಞಾನವನ್ನು ಹಿಂದಿನ ಮತ್ತು ಮುಂದಿನ ಜನರಿಗಾಗಿ ಈ ಗ್ರಂಥದಲ್ಲಿ ತುಂಬಿಸಲಾಗಿದೆ. ಅದರ ಅಧ್ಯಾಪನೆ ಎಂತಹದ್ದು ಎಂದರೆ, ಅದರ ವ್ಯಾಖ್ಯಾನ ಪ್ರತಿಯೊಂದು ಕಾಲಘಟ್ಟಕ್ಕೆ ಅನುಸಾರವಾಗಿ ಅರಿವು ನೀಡುತ್ತದೆ. ಸ್ವಲ್ಪ ಪದಗಳಲ್ಲಿ ಅರಿವಿನ ನದಿಯನ್ನು ಹರಿಸಿರುವ ಇಂತಹ ಬೇರೆ ಗ್ರಂಥವನ್ನು ಯಾರಾದರೂ ಎಂದಾದರೂ ನೋಡಿರುವರೋ?

ಪವಿತ್ರ ಖುರ್‌ಆನಿನ ಶ್ರೇಷ್ಠತೆಗಳನ್ನು ನಿಮಗೆ ತೋರಿಸುವೆನು ಎಂದು ಹಝ್ರತ್ ಮಸೀಹ್ ಮೌಊದ್(ಅ) ಪ್ರತಿಯೊಂದು ಧರ್ಮದೊಡನೆ ಚ್ಯಾಲೇಂಜ್ ಮಾಡಿದ್ದರು. ಇಂದಿನ ತನಕ ಯಾರೂ ಈ ಪಂಥಾಹ್ವಾನಕ್ಕೆ ಉತ್ತರ ನೀಡಿಲ್ಲ. ಅಂತಿದ್ದೂ ಅಹ್ಮದಿಯರಾದ ನಮ್ಮ ಮೇಲೆ ಪವಿತ್ರ ಖುರ್‌ಆನ್ ನಿಂದೆಯ ಆರೋಪ ಹೊರಿಸಲಾಗುತ್ತದೆ. ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಪವಿತ್ರ ಖುರ್‌ಆನನ್ನು ಪರಿಪೂರ್ಣವಾಗಿ ಅನುಸರಿಸುವವರೇ ನಮ್ಮ ಪ್ರಕಾರ ಸತ್ಯವಿಶ್ವಾಸಿಯಾಗಿರುತ್ತಾರೆ.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಮೋಕ್ಷಕ್ಕಾಗಿ ಅಲ್ಲಾಹನು ಪದೇ ಪದೇ ಹೇಳಿರುವುದೇನೆಂದರೆ, ಮೊತ್ತಮೊದಲು ಅಲ್ಲಾಹನನ್ನು ಏಕನೂ ಸಹಭಾಗಿ ಇಲ್ಲದವನೂ ಎಂದು ನಂಬಬೇಕು, ಹಝ್ರತ್ ಪೈಗಂಬರ್(ಸ) ಸತ್ಯ ಪ್ರವಾದಿ ಯಾಗಿರುವರು ಎಂದು ದೃಢವಿಶ್ವಾಸ ಹೊಂದಿರಬೇಕು ಮತ್ತು ಪವಿತ್ರ ಖುರ್‌ಆನನ್ನು ಅಲ್ಲಾಹನ ಗ್ರಂಥವೆಂದು ಅರಿಯಬೇಕು.

ದಿವ್ಯವಾಣಿಯಾದ ಪವಿತ್ರ ಖುರ್‌ಆನಿನ ಮಹಿಮೆಯ ಕುರಿತು ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಆಲಿಸಿರಿ, ಪವಿತ್ರ ಖುರ್‌ಆನಿಗೆ ಸಮಾನವಾದದ್ದನ್ನು ತರುವೆವು ಎಂದು ವಾದಿಸುವವರ ಮೇಲೆ ಅಲ್ಲಾಹನ ಶಾಪ. ಪವಿತ್ರ ಖುರ್‌ಆನ್ ಒಂದು ಪವಾಡವಾಗಿದೆ. ಅದಕ್ಕೆ ಸಮಾನವಾದದ್ದನ್ನು ಯಾವನೇ ಮನುಷ್ಯನಿಗೆ ಅಥವಾ ಜಿನ್ನಿಗೆ ತರಲು ಸಾಧ್ಯವಲ್ಲ. ಅದರಲ್ಲಿ ಜ್ಞಾನಗಳು ಮತ್ತು ಗುಣವೈಶಿಷ್ಟ್ಯಗಳು ಒಳಗೊಂಡಿವೆ. ಅವುಗಳನ್ನು ಒಟ್ಟು ಸೇರಿಸಲು ಮನುಷ್ಯನ ಅರಿವಿಗೆ ಸಾಧ್ಯವಲ್ಲ.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ನನ್ನ ಜೊತೆಗೆ ಯಾವುದಾದರೂ ದೃಷ್ಟಾಂತ ಮತ್ತು ದೈವಿಕ ಸಹಾಯ ಇಲ್ಲದೇ ಇರುತ್ತಿದ್ದರೆ, ನಾನು ಪವಿತ್ರ ಖುರ್‌ಆನನ್ನು ಬಿಟ್ಟು ಬೇರೆ ಮಾರ್ಗವನ್ನು ಉಂಟುಮಾಡಿರುತ್ತಿದ್ದರೆ, ಪವಿತ್ರ ಖುರ್‌ಆನಿನಲ್ಲಿ ಯಾವುದಾದರೂ ಆದೇಶವನ್ನು ಸೇರಿಸುತ್ತಿದ್ದರೆ ಅಥವಾ ರದ್ದುಪಡಿಸುತ್ತಿದ್ದರೆ ಅಥವಾ ಹಝ್ರತ್ ಪೈಗಂಬರ್(ಸ)ರಿಗೆ ಭಿನ್ನವಾದ ಮಾರ್ಗವನ್ನು ಕೈಗೊಂಡಿರುತ್ತಿದ್ದರೆ, ಈ ವ್ಯಕ್ತಿ ಹಝ್ರತ್ ಪೈಗಂಬರ್(ಸ)ರ ಮತ್ತು ಪವಿತ್ರ ಖುರ್‌ಆನಿನ ಶತ್ರುವಾಗಿರುವನು ಎಂಬ ಜನರ ಹೇಳಿಕೆ ಸರಿಯೆಂದು ಭಾವಿಸಬಹುದಾಗಿತ್ತು. ಆದರೆ ನಾನು ಪವಿತ್ರ ಖುರ್‌ಆನಿನಲ್ಲಿ ಯಾವುದೇ ಬದಲಾವಣೆಯನ್ನು ಮಾಡಿಯೂ ಇಲ್ಲ, ಹಿಂದಿನ ಶರೀಅತಿನಲ್ಲಿ ಯಾವುದೇ ಚುಕ್ಕಿಯನ್ನು ಸಹ ಬದಲಾಯಿಸಿಯೂ ಇಲ್ಲ. ಬದಲಾಗಿ ನಾನು ಪವಿತ್ರ ಖುರ್‌ಆನಿನ, ಖುರ್‌ಆನಿನ

ಆದೇಶಗಳ ಮತ್ತು ಹಝ್ರತ್ ಪೈಗಂಬರ್(ಸ)ರ ಪರಿಶುದ್ಧ ಧರ್ಮದ ಸೇವೆಗಾಗಿ ಕಠಿಣ ಪ್ರಯತ್ನವನ್ನು ಮಾಡುತ್ತಿದ್ದೇನೆ.

(ಹುಝೂರ್ ಹೇಳಿದರು:) ಹಝ್ರತ್ ಮಸೀಹ್ ಮೌಊದ್(ಅ)ರ ಮೂಲಕವೇ ಪವಿತ್ರ ಖುರ್ಆನಿನ ಅರಿವುಗಳು ನಮಗೆ ತಲುಪಿವೆ ಎಂಬುದು ಹಝ್ರತ್ ಮಸೀಹ್ ಮೌಊದ್(ಅ)ರ ವಾದವಾಗಿದೆ. ಆ ವಾದದಲ್ಲಿ ನಮಗೆ ದೃಢವಿಶ್ವಾಸವಿದೆ. ಅವರು ನಮಗೆ ಯಥಾರ್ಥವಾದ ಜ್ಞಾನಗಳನ್ನು ದಯಪಾಲಿಸಿದರು. ಜಮಾಅತನ್ನು ಆಕ್ಷೇಪಿಸುವವರು ಚಿಂತಿಸಬೇಕಾಗಿದೆ. ಈ ಜನರು ಹಿಂದೆ ಸರಿಯುತ್ತಿಲ್ಲವಾದ ಕಾರಣ ಅಲ್ಲಾಹನು ಅವರನ್ನು ಹಿಡಿಗೂಡದೇ ಬಿಡಲಿಕ್ಕಿಲ್ಲ.

(ನ್ಯಾಯಪಾಲನೆಯ ಬಗ್ಗೆ ಪವಿತ್ರ ಖುರ್ಆನಿನ ಆದೇಶದ ಬಗ್ಗೆ ಹಝ್ರತ್ ಮಸೀಹ್ ಮೌಊದ್(ರ)ರ ಲಿಖಿತಗಳ ಮೂಲಕ ಬೆಳಕು ಬೀರಿದ ನಂತರ ಹುಝೂರ್ ಹೇಳಿದರು:) ಈ ತತ್ವಗಳು ಲೋಕ ಶಾಂತಿಗೆ ಖಾತರಿ ನೀಡುವಂಥದ್ದಾಗಿವೆ. ಭೌತಿಕ ಯುದ್ಧಗಳಲ್ಲಿ ಮುಳುಗಿರುವ ಸಮುದಾಯಗಳು ಈ ತತ್ವಗಳನ್ನು ಮನವರಿಕೆ ಮಾಡಿದರೆ ಶಾಂತಿ ಸ್ಥಾಪನೆಯಾಗುವುದು. ನ್ಯಾಯಪಾಲನೆ ಮಾಡದಿದ್ದರೆ ವಿನಾಶ ನಿಶ್ಚಿತ.

ಪವಿತ್ರ ಖುರ್ಆನಿನ ಪರಿಪೂರ್ಣ ಅಧ್ಯಾಪನೆಯ ಬಗ್ಗೆ ಹೇಳಿದ ನಂತರ ಹಝ್ರತ್ ಮಸೀಹ್ ಮೌಊದ್(ಅ) ಹೀಗೆ ಘೋಷಿಸಿದರು: ಪವಿತ್ರ ಖುರ್ಆನಿನಲ್ಲಿ ಇಲ್ಲದ ಯಾವುದಾದರೂ ಸತ್ಯತೆಯನ್ನು ಅಥವಾ ಯಾವುದಾದರೂ ಸತ್ಯತೆಯನ್ನು ಪವಿತ್ರ ಖುರ್ಆನಿಗಿಂತ ಹೆಚ್ಚು ಉತ್ತಮವಾಗಿ ಬೇರೆ ಗ್ರಂಥದಲ್ಲಿ ವಿವರಿಸಿದ್ದಾಗಿ ತೋರಿಸುವುದಾದರೆ ನಾವು ಮರಣದಂಡನೆಯನ್ನು ಸ್ವೀಕಾರ ಮಾಡಲು ತಯಾರಿದ್ದೇವೆ.

ಏಕದೇವ ವಿಶ್ವಾಸ, ದೇವನೊಂದಿಗೆ ತೋರಿಸಬೇಕಾದ ಗೌರವ ಮತ್ತು ದೇವನ ಏಕತ್ವದ ಬಗ್ಗೆ ಪರಿಪೂರ್ಣವಾಗಿ ಉಲ್ಲೇಖಿಸಲಾಗಿರುವ ದೈವಿಕ ವಚನ ಇಂದು ಪವಿತ್ರ ಖುರ್ಆನ್ ಮಾತ್ರವಾಗಿದೆ. ಪವಿತ್ರ ಖುರ್ಆನ್ ದೇವನ ಮೇಲೆ ಯಾವುದೇ ಕೊರತೆಯನ್ನು ಆರೋಪಿಸುವುದಿಲ್ಲ. ಒತ್ತಾಯಪೂರ್ವಕವಾಗಿ ಯಾವುದೇ ಪಾಠವನ್ನು ಒಪ್ಪಲು ಅದು ಹೇಳುವುದಿಲ್ಲ. ಜನರ ಮಾತುಗಳಲ್ಲಿ ಮತ್ತು ಕೃತ್ಯಗಳಲ್ಲಿ ಇರುವ ಕೆಡುಕುಗಳನ್ನು ಸುಧಾರಣೆ ಮಾಡುತ್ತದೆ. ಎಲ್ಲ ಕೆಡುಕುಗಳಿಗೆ ಅವುಗಳು ಹರಡಿರುವ ರೀತಿಯಲ್ಲೇ ತಡೆಯನ್ನು ಹಾಕುತ್ತದೆ.

(ಹುಝೂರ್ ಹೀಗೆ ದುಆ ಮಾಡಿದರು:) ಅಲ್ಲಾಹನು ನಮಗೆ ಪವಿತ್ರ ಖುರ್ಆನನ್ನು ಸರಿಯಾಗಿ ಓದಲು, ಮನವರಿಕೆ ಮಾಡಲು ಮತ್ತು ಜೀವಿತದಲ್ಲಿ ಅಳವಡಿಸಿಕೊಳ್ಳಲು ಸೌಭಾಗ್ಯ ನೀಡಲಿ. ರಮಝಾನಿನಲ್ಲಿ ಪವಿತ್ರ ಖುರ್ಆನಿನಿಂದ ಪ್ರಯೋಜನ ಪಡೆಯುವ ರೀತಿಯಲ್ಲೇ ರಮಝಾನಿನ ನಂತರವೂ ನಾವು ಪ್ರಯೋಜನ ಪಡೆಯುವಂತಾಗಲಿ.

(ಖುತ್ಬದ ಕೊನೆಯಲ್ಲಿ ರಮಝಾನಿನಲ್ಲಿ ದುಆಗಳನ್ನು ಮಾಡಲು ಗಮನ ಸೆಳೆಯುತ್ತಾ ಹುಝೂರ್ ಹೇಳಿದರು:) ಜಮಾಅತಿನ ವಿರೋಧಿಗಳ ಉಪದ್ರವಗಳಿಂದ ರಕ್ಷಣೆ ಪಡೆಯಲು ವಿಶೇಷವಾಗಿ ದುಆಗಳನ್ನು ಮಾಡಿರಿ. ಅಲ್ಲಾಹನು ಪ್ರತಿಯೊಬ್ಬ ದುಷ್ಟನ ಕೈಗಳನ್ನು ತಡೆಯಲಿ ಮತ್ತು ಅವರನ್ನು ಹಿಡಿಗೂಡಲಿ. (ಅದೇ ರೀತಿಯಲ್ಲಿ ಲೋಕದ ಅವಸ್ಥೆಗಳಿಗಾಗಿ ಮತ್ತು ಫೆಲಸ್ತೀನಿನ ಮುಸ್ಲಿಮರಿಗಾಗಿಯೂ ವಿಶೇಷವಾಗಿ ದುಆ ಮಾಡಲು ಹುಝೂರ್ ಹೇಳಿದರು. ಅಲ್ಲಾಹನು ಆ ದುಷ್ಟರ ದೌರ್ಜನ್ಯಗಳಿಂದ ಮುಸ್ಲಿಮರನ್ನು ರಕ್ಷಿಸಲಿ ಎಂದು ಹುಝೂರ್ ದುಆ ಮಾಡಿದರು.)

*****

اَلْحَمْدُ لِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَاهَادِىَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُ بِالْعَدْلِ وَالْاِحْسَانِ وَاِيْتَاءِ ذِى الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْىِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.


***Friday Sermon delivered by Hadrath Khaleefatul Masih Al Khamis(atba)***

*At,Masjid Baithul Futhuh London, UK. On 07-04-2023*

**Summarized by** *Majlis Ansarullah Bharat*

***Kannada Translation:*** Moulavi Inamullah for Kannada Desk, Qadian

***Reviewed by:*** M.P Ibrahim |***Layout:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

**Email**: *khutuba.kannada@gmail.com*

**You can find all the Sermons archived at**: www.alislam.org/friday-sermon